ಶ್ರೀ ಎ.ಆರ್. ಕೃಷ್ಣಮೂರ್ತಿ :- ನಾನು ಬೆಳಿಗ್ಗೆ ಸದನದಲ್ಲಿ ನಾಗಪ್ಪನವರ ನಿಗೂಢ ಹತ್ಯೆ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಿದ್ದೆ. ತಾವು ಮಧ್ಯಾಹ್ನದ ವಿರಾಮದ ನಂತರ ಅವಕಾಶ ಮಾಡಿಕೊಡುವುದಾಗಿ ಹೇಳಿದ್ದಿರಿ.

9) ಮಂತ್ರಿಗಳ ಹೇಳಿಕೆ

ಅ) ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗ ಹೋಬಳಿ ಉಜ್ಜನೆ ಗ್ರಾಮದಲ್ಲಿ ನಡೆದಂತ ಘಟನೆ ಬಗ್ಗೆ -

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಶ್ರೀ ಸೋಮಶೇಖರ್‌ರವರು ರೈಜ್ ಮಾಡಿದ್ದ ಕುಣಿಗಲ್ ವಿಚಾರವಿದೆ.

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :- ಮಾನ್ಯ ಅಧ್ಯಕ್ಷರೆ, ಕುಣಿಗಲ್ ಪ್ರಕರಣದ ಬಗ್ಗೆ ಬೆಳಿಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದರು. ಛೇರ್ಮನ್‌ರವರೆ, ಹಿರಿಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಕುಣಿಗಲ್ ಪ್ರಕರಣದ ಬಗ್ಗೆ ಪ್ರಸ್ತಾಪಿಸಿ ಸರ್ಕಾರ ಏನೆಲ್ಲಾ ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕೆಂದು ಹೇಳಿದರು. ಅದರ ಬಗ್ಗೆ ಬ್ರೀಫ್ ಆಗಿ ಒಂದು ಹೇಳಿಕೆ ತಯಾರು ಮಾಡಿದ್ದೇನೆ. ತಾವು ಸಮಯ ಕೊಟ್ಟರೆ 2 ನಿಮಿಷದಲ್ಲಿ ತಮ್ಮ ಅವಗಾಹನೆಗೆ ತರಲು ಪ್ರಯತ್ನ ಮಾಡುತ್ತೇನೆ.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗ ಹೋಬಳಿ ಉಜ್ಜನೆ ಗ್ರಾದಲ್ಲಿ ಸುಮಾರು 600 ಮನೆಗಳಿದ್ದು 3000 ಜನಸಂಖ್ಯೆ ಇರುತ್ತದೆ ಈ ಪೈಕಿ ಪರಿಶಿಷ್ಟ ಜಾತಿಗೆ ಸೇರಿದ 139 ಮನೆಗಳಿದ್ದು ಜನಸಂಖ್ಯೆ 675 ಇರುತ್ತದೆ.

ಗುಡ್ಡದ ಚೌಡೇಶ್ವರಿ ದೇವಸ್ಥಾನದ ಹತ್ತಿರ ದಲಿತರಿಗೆ ಸೇರಿದ ಜಮೀನು ಇದ್ದು ಚೌಡೇಶ್ವರಿ ದೇವಸ್ಥಾನದ ಇನಾಮತಿ ಜಮೀನು ಸರ್ವೆ ನಂ. 251ಎ ಅರ್ಚಕರಾದ ನರಸಿಂಹ ದೀಕ್ಷಿತರ ಪತ್ನಿ ಶ್ರೀಮತಿ ಸುಂದರಮ್ಮ ಎಂಬುವವರಿಗೆ ಇನಾಂ ಕಾನೂನು ಪ್ರಕಾರ ಜಮೀನು ಮಂಜೂರಾಗಿದ್ದು ಇದನ್ನು ಒಕ್ಕಲಿಗ ಜನಾಂಗದ ಕುನ್ನೇಗೌಡ ಮತ್ತಿತರರು ಖರೀದಿಸಿ ತಂತಿ ಬೇಲಿ ಹಾಕಲು ಪ್ರಯತ್ನಿಸಿರುತ್ತಾರೆ. ಮೇಲ್ಕಂಡ ಜಮೀನನ್ನು ಈ ಮೊದಲು ಪರಿಶಿಷ್ಟ ಜಾತಿಯ ಜನರು ತಮ್ಮ ತಿಪ್ಪಿಗುಂಡಿಗಳನ್ನಾಗಿ ಉಪಯೋಗಿಸಲು ಹಾಗೂ ಅವರಿಗೆ ಸೇರಿದ ಜಮೀನಿಗೆ ಹೌದು ಹೋಗಲು ರಸ್ತೆಯನ್ನಾಗಿ ಕೂಡ ಉಪಯೋಗಿಸುತ್ತಿದ್ದರು. ಇದನ್ನು ಖರೀದಿದಾರರು ವಿರೋಧಿಸಿದಾಗ ಪರಿಶಿಷ್ಟ ಜನಾಂಗದವರು ಈ ಜಮೀನಿನ ಮಾರಾಟವನ್ನು ವಿರೋಧಿಸಿ ಸದರಿ ಜಮೀನನ್ನು ನಿವೇಶನಗಳನ್ನಾಗಿ ಪರಿವರ್ತಿಸಿ ತಮಗೆ ರಸ್ತೆ ಮತ್ತು ನಿವೇಶಗಳನ್ನು ತಮಗೆ ನೀಡಬೇಕೆಂದು ಒತ್ತಾಯಿಸಿರುತ್ತಾರೆ. ಈ ವಿವಾದದಿಂದ ಕುಪಿತಗೊಂಡ ಒಕ್ಕಲಿಗ ಜನಾಂಗದವರು ದಿನಾಂಕ 6.11.2002ರಂದು ತಹಶೀಲ್ದಾರರಿಗೆ ಒಂದು ಮನವಿಯನ್ನು ಸಲ್ಲಿಸಿ ಪ್ರತಿಭಟನೆ ವ್ಯಕ್ತಪಡಿಸಿದ್ದು, ವಾಪಸ್ಸು ಗ್ರಾಮಕ್ಕೆ ಹಿಂತಿರುಗುವಾಗ ಕೆಲವು ಸವರ್ಣೀಯರು ದಲಿತ ಮನೆಗಳಿಗೆ ನುಗ್ಗಿ ಮನೆಗಳಿಗೆ ಹಾನಿ ಉಂಟು ಮಾಡಿರುತ್ತಾರೆ. ಸ್ಥಳೀಯ ತಹಶೀಲ್ದಾರ್ ಮತ್ತು ಇತರೆ ಅಧಿಕಾರಿಗಳು ಒಟ್ಟು 74 ಮನೆಗಳಿಗೆ ಹಾನಿಯಾಗಿದ್ದು 32,859 ನಷ್ಟ ಆಗಿರುವುದಾಗಿ ಅಂದಾಜು ಮಾಡಿರುತ್ತಾರೆ.

ಈ ಬಗ್ಗೆ ನಾನು ಸ್ಥಳೀಯ ಮತ್ತು ಜಿಲ್ಲಾ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು ನಷ್ಟವನ್ನು ಪರಿಹಾರದ ರೂಪದಲ್ಲಿ ಮಂಜೂರು ಮಾಡಲು ತಿಳಿಸಿದ್ದು ದಿನಾಂಕ 8.11.2002ರಲ್ಲಿ 32,850

ರೂಪಾಯಿಗಳ ಪರಿಹಾರವನ್ನು ಸಂಬಂಧಿಸಿದ 84 ಜನರಿಗೆ ವಿತರಿಸಲಾಗಿದೆ. ಪರಿಶಿಷ್ಟ ಜನಾಂಗದ ವಸತಿ ಪ್ರದೇಶದಲ್ಲಿ ಒಂದು ಹೊಸ ಬೋರ್‌ವೆಲ್ ಕೊರೆಯಲು ಕ್ರಮ ಕೈಗೊಳ್ಳಲಾಗಿದೆ. 40 ಗುಡಿಸಲುಗಳನ್ನು ಅಂಬೇಡ್ಕರ್ ಯೋಜನೆಯಲ್ಲಿ ಪಕ್ಕಾ ಮನೆಗಳಾಗಿ ಪರಿವರ್ತಿಸಲು ಆದೇಶ ನೀಡಲಾಗಿದೆ. ಪರಿಶಿಷ್ಟ ಜಾತಿಯ ಜನಾಂಗದವರ ಮೇಲೆ ಆಕ್ರಮಣ ಮಾಡಿದ 24 ಜನರ ಮೇಲೆ ದೌರ್ಜನ್ಯ ಕಾಯ್ದೆ ಅಡಿ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ.

3.30 ಪಿ.ಎಂ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಛೇರ್ಮನ್‌ರವರೆ, ನಾನು ಆ ಊರಿಗೆ ಭೇಟಿ ಕೊಟ್ಟಾಗ ಕೆಲವು ಜನ ನನ್ನ ಹತ್ತಿರ ಬಂದಿದ್ದರು, ಇವತ್ತು ಅವರು ಭಯದ ವಾತಾವರಣದಲ್ಲಿ ವಾಸ ಮಾಡುತ್ತಿದ್ದಾರೆ. ಯಾವಾಗ ನಮ್ಮ ಮೇಲೆ ಬೀಳುತ್ತಾರೋ, ಧ್ವಂಸ ಮಾಡುತ್ತಾರೋ ಕೊಲೆಗಳಾಗುತ್ತವೆಯೋ ಎನ್ನುವ ಭಯ, ಭೀತಿಯಲ್ಲಿ ಜನ ಬದುಕುತ್ತಿದ್ದಾರೆ. ಆ ಸ್ಥಳೀಯ ಪೊಲೀಸರು ರಾಜಕಾರಣ ಮಾಡಿಕೊಂಡು ಸ್ಥಳೀಯ ಮುಖಂಡರು ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಯಾರು ಇದಕ್ಕೆ ಬೆಂಬಲ ಕೊಟ್ಟಿದ್ದಾರೆ ಅವರನ್ನು ಕೊನೇಪಕ್ಷ ತಕ್ಷಣ ವರ್ಗಾವಾದರೂ ಮಾಡಿ. ನಾನು ಅಲ್ಲಿಗೆ ಹೋದಾಗ ಅವರು ಹೇಳಿದರು, ಸ್ಥಳೀಯ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಸ್ಥಳೀಯ ಮುಖಂಡರ ಪರವಾಗಿಯೇ ಕೆಲಸ ಮಾಡುತ್ತಿದ್ದಾರೆ, ನಮಗೆ ರಕ್ಷಣೆ ಇಲ್ಲ ಕೇಸ್ ತೆಗೆದುಕೊಳ್ಳುತ್ತಿಲ್ಲವೆಂದು ಹೇಳುತ್ತಿದ್ದಾರೆ. ಈಗ ಅವರನ್ನು ನೀವು ವರ್ಗ ಮಾಡಿ, ನೀವು ಒಂದು ನೀತಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಜಾತಿಯ ಶಾಸಕರುಗಳಿದ್ದಾರೆ. ಆ ಜಾತಿಯ ಇನ್ಸ್‌ಪೆಕ್ಟರ್‌ಗಳು ಇರಬಾರದು, ಇದೊಂದು ಪಾಲಿಸಿ ಮಾಡಿ. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಇವತ್ತೂ ಇದರಿಂದ ತೊಂದರೆಯಾಗಿದೆ. ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಕೇಸ್ ರಿಜಿಸ್ಟರ್ ಮಾಡಿದ್ದೇವೆ ಎಂದು ತಾವು ಹೇಳಿದಿರಿ. ಇನ್ನು ಅಲ್ಲಿಯ ಜನರು ಬಹಳ ಭಯದಿಂದ ಇದ್ದಾರೆ ಚಾರ್ಜ್‌ಶೀಟ್ ಹಾಕಿದ್ದೀರಾ? ಅದನ್ನು ಹಾಕದಿದ್ದರೆ ಏತಕ್ಕಾಗಿ ಹಾಕಲಿಲ್ಲ ಏನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಯಾರು ವಿಳಂಬವನ್ನು ಮಾಡುತ್ತಿದ್ದಾರೆ. ಇದನ್ನು ನಾವು ಹೇಳಬೇಕಾಗುತ್ತದೆ. ಅವರು ಮೊನ್ನೆಯ ದಿವಸವೂ ನನ್ನ ಹತ್ತಿರ ಬಂದು ಭಯದಲ್ಲಿ ಇದ್ದೇವೆಂದು ಹೇಳಿದ್ದಾರೆ, ಅವರು ಕಂಬಾಲಪಲ್ಲಿಯ ಹಾಗೆ ನಿಮ್ಮನ್ನು ಮಾಡುತ್ತೇವೆಂದು ಹೇಳಿದ್ದಾರಂತೆ ನೀವು ಅವರ ದೂರು ಕೇಳಿದ್ದೀರಾ? ವಿರೋಧ ಪಕ್ಷದವರು ನಿಮ್ಮ ಹತ್ತಿರ ಬಂದಿದ್ದಾರಾ? ನಾನು ಅಲ್ಲಿಗೆ ಹೋಗಿದ್ದಕ್ಕೆ ಏತಕ್ಕಾಗಿ ಅವರನ್ನು ಕರೆಸಿದ್ದೀರಿ ಎಂದು ಆಕ್ಷೇಪಣೆಯನ್ನು ಮಾಡಿದ್ದಾರೆ. ಅವರೇನು ನನ್ನನ್ನು ಕರೆಸಲಿಲ್ಲ. ನಾನೇ ಅಲ್ಲಿಗೆ ಹೋಗಿದ್ದೆ. ಅಲ್ಲಿ ಏನು ತೊಂದರೆಯಾಗಿದೆ ಅದನ್ನು ತಿಳಿದುಕೊಳ್ಳೋಣವೆಂದು ಹೋಗಿದ್ದೆ. ಅದಕ್ಕಾಗಿ ಅವರು ಅವರ ಮೇಲೆ ಸೇಡುತೀರಿಸಿಕೊಳ್ಳುವುದಕ್ಕೆ ಹೊರಟರೆ ಇನ್ನು ನ್ಯಾಯ ಇರುತ್ತದೆಯೇ? ತಾವು ಹೋಂ ಮಿನಿಸ್ಟರ್ ಆಗಿರುವಾಗ ಭಯ ಭೀತಿ ಇಲ್ಲದೆ ಇದ್ದರೆ ಏನು ಸ್ವಾಮಿ? ತಾವು ಯೋಚನೆ ಮಾಡಿ, ನೀವು ಹೋಂ ಮಿನಿಸ್ಟರ್ ಆಗಿ ಕೆಲಸ ಮಾಡುವುದಲ್ಲ, You should not work, your image should work. such image has not been given to the state at all. unfortunate, I am very sorry for that. ಏಕೆ ಈ ರೀತಿಯಾಗಿ ಎಲ್ಲಾ ಕಡೆ ನಡೆಯುತ್ತಿದೆ? ಮೂರು ವರ್ಷದಲ್ಲಿ ಈ ರೀತಿಯ ದಲಿತರ ಮೇಲೆ

ದಬ್ಬಾಳಿಕೆ ಎಷ್ಟು ಕಡೆಗಳಲ್ಲಿ ನಡೆದಿದೆ? ಒಬ್ಬರ ಮೇಲೆ ಅಲ್ಲ, ಇಡೀ ಜನಾಂಗದ ಮೇಲೆ ನಡೆಯುತ್ತಿದೆ. ಅದಕ್ಕೆ ಸ್ಥಳೀಯ ಪೊಲೀಸರು ಕಾರಣರಾಗಿದ್ದಾರೆ. ಅದಕ್ಕಾಗಿ ತಾವು ಏನು ಮಾಡಬೇಕೆಂದರೆ, ಎಸ್‌ಪಿಯವರನ್ನು ಜವಾಬ್ದಾರರನ್ನಾಗಿ ಮಾಡುತ್ತೇವೆಂದು ತಾವು ಹೇಳಿದಿರಿ, ಅವರನ್ನು ಜವಾಬ್ದಾರನ್ನಾಗಿ ಮಾಡಬೇಕಾದರೆ ಎಸ್.ಪಿ.ಯವರಿಗೆ ಸಬ್ ಇನ್ಸ್‌ಪೆಕ್ಟರ್‌ರವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ತಾವು ಅಧಿಕಾರವನ್ನು ಕೊಡಬೇಕಾಗುತ್ತದೆ. ಇನ್ಸ್‌ಪೆಕ್ಟರ್ ಕಾನ್ಸ್‌ಟೇಬಲ್‌ಗಳನ್ನು ನೀವು ಇಲ್ಲಿಂದ ಟ್ರಾನ್ಸ್ ಫರ್ ಮಾಡುವುದು, ಎಸ್‌ಪಿಯವರಿಗೆ ನೀವು ಜುಟ್ಟು ಹಿಡಿಯಿರಿ ಎಂದು ಹೇಳಿದರೆ ಅವರು ಎಲ್ಲಿ ಕೇಳುತ್ತಾರೆ? ಈ ಪರಿಸ್ಥಿತಿಯಾಗಿದೆ, ನೀವು ಮೊದಲು ಆಡಳಿತದ ವರ್ಗಾವರ್ಗಿಯಲ್ಲಿ ಹಸ್ತಕ್ಷೇಪ ಮಾಡಬಾರದು. ಆಗ ಏನಾದರೂ ಆಗುತ್ತದೆ. ಅದು ಇಲ್ಲದೆ ಹೋದರೆ ನೀವು ಏನು ಬಿಗಿ ಮಾಡುವುದಕ್ಕಾಗುವುದಿಲ್ಲ, ಅದರ ಬಗ್ಗೆ ತಾವು ಹೇಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಮಾನ್ಯ ಛೇರ್ಮನ್‌ರವರೆ, ನಾನು ಈಗಾಗಲೇ ಹೇಳಿದ್ದೇನೆ, ಎಡಿಜಿಪಿಯವರು ಅಲ್ಲಿಗೆ ಸ್ವತಃ ಹೋಗಿ ಬಂದಿದ್ದಾರೆ, ಅಲ್ಲಿಯ ಪರಿಸ್ಥಿತಿಯನ್ನು ಅವರು ಗಮನದಲ್ಲಿಟ್ಟುಕೊಂಡೇ ಸ್ವತಃ ಭೇಟಿ ಕೊಟ್ಟು ಎಲ್ಲಾ ರೀತಿಯಿಂದಲೂ ಶಾಂತ ರೀತಿಯಿಂದ ನಡೆಯತಕ್ಕಂಥ ವ್ಯವಸ್ಥೆಯನ್ನು ಮಾಡಿದಾರೆ. ಆದರೆ ಇನ್ನು ಕೂಡ ಭಯ ಭೀತಿ ಇದೆ ಎಂದು ಅವರು ಹೇಳುತ್ತಿದ್ದಾರೆ. ಪುನಃ ನಾನು ಒಮ್ಮೆ ನಮ್ಮ ಡಿಜಿಪಿ ಮತ್ತು ಐಜಿಪಿಯವರಿಗೆ ಹೇಳಿ ಅಲ್ಲಿರತಕ್ಕಂಥ ಎಸ್‌ಪಿಯವರಿಗೆ, ಕೇಸ್ ರಿಜಿಸ್ಟರ್ ಮಾಡಲಿಲ್ಲವೆಂದರೆ, ಏಕೆ ಮಾಡಲಿಲ್ಲ ಎನ್ನತಕ್ಕಂಥದ್ದರ ಬಗ್ಗೆ ಅವರಿಗೆ ಎಕ್ಸ್‌ಪ್ಲನೇಷನ್‌ನ್ನು ಕಾಲ್‌ಪುರ್ ಮಾಡುತ್ತೇನೆ.ಎರಡನೆಯದಾಗಿ, ಈಗ ಸಮಯವಿಲ್ಲ, ಇದನ್ನು ಚರ್ಚೆ ಮಾಡತಕ್ಕಂಥದ್ದರ ಬಗ್ಗೆ ಸಂಬಂಧವಿಲ್ಲ. ಈ ಸರ್ಕಾರ ಬಂದ ಮೇಲೆ ಹರಿಜನರ ಮೇಲೆ ದೌರ್ಜನ್ಯವಾಗಿದೆ ಎನ್ನತಕ್ಕಂಥ ಬಹಳ ಅಪಪ್ರಚಾರ ಒಂದು ಕಡೆ ನಡೆದಿದೆ. ಎರಡನೆಯದು ಟ್ರಾನ್ಸ್‌ಫರ್ ಬಗ್ಗೆ ನೀವು ಏನು ಮಾಡುತ್ತೀರಿ ಎಂದರೆ ಸಬ್ ಇನ್ಸ್‌ಪೆಕ್ಟರ್ ಅವರ ವರ್ಗ ಸರ್ಕಾರದಿಂದ ಆಗುತ್ತದೆಯೇ? ರೊಟೀನ್ ಕೋರ್ಸ್ ಮೇಲೆ ಡಿಜಿಪಿಯಿಂದ ಆಗುತ್ತದೆ. ಅನೇಕ ಸಾರಿ ಎಸ್‌ಪಿಗಳು within the ಡಿಸ್ಟ್ರಿಕ್ಟ್‌ಗಳಲ್ಲಿ ಟ್ರಾನ್ಸ್‌ಫರ್ ಮಾಡುತ್ತಾರೆ. ಮಾನ್ಯ ಛೇರ್ಮನ್‌ರವರೇ ಇದರ ಬಗ್ಗೆ ತಮಗೂ ಕೂಡ ಗೊತ್ತಿದೆ. ಅನೇಕ ಸಾರಿ ಎಸ್‌ಪಿಗಳೇ ವರ್ಗಾವಣೆಯನ್ನು ಮಾಡಿಕೊಳ್ಳುತ್ತಾರೆ. ಅಪರೂಪಕ್ಕೆ ಯಾವುದೋ ಒಂದೋ, ಎರಡೋ, ಪ್ರಿಮೆಚ್ಯೂರ್ ಇದ್ದರೆ, ಕಂಪ್ಲೈಂಟ್ ಇದ್ದರೆ ಅಂಥವರಿಗೆ ಮಾತ್ರ ಇಲ್ಲಿಂದ ವರ್ಗ ಮಾಡುತ್ತೇವೆ. ಅದರ ಕಾಲದಲ್ಲಿಯೂ ಮಾಡುತ್ತಿದ್ದರು ನಾವು ಕೂಡ ಅದನ್ನೇ ಮಾಡುತಿದ್ದೇವೆ. ಅದು ಏನಾಗುತ್ತದೆಂದರೆ, ಅದನ್ನೇ ದೊಡ್ಡದಾಗಿ ಮಾಡಿಕೊಂಡು, ಪದೇ ಪದೇ ಅದನ್ನೇ ಹೇಳುವುದರಿಂದ, ನೀವು ನೂರು ಸಾರಿ ಹೇಳಿದರೆ ಅದು ಸತ್ಯವಾಗುತ್ತದೆ, ನಾನು ಹೇಳತಕ್ಕಂಥದ್ದು ಸುಳ್ಳಾಗುತ್ತದೆ. ಅದಕ್ಕಾಗಿ ನಾವು ಒಳ್ಳೆಯದು ಮಾಡಿದ್ದನ್ನು ಮೆಚ್ಚಿ, ಅಥವಾ ತಪ್ಪಾಗಿದ್ದರೆ ಇಂಥದ್ದು ತಪ್ಪಾಗಿದೆ ಎಂದು ಹೇಳಿದರೆ ಅದನ್ನು ನಾವು ಬೇಕಾದರೆ ತಿದ್ದಿಕೊಳ್ಳೋಣ. ಕಂಬಾಲಪಲ್ಲಿಯ ಬಗ್ಗೆ ಇಲ್ಲಿ ಡಿಸ್‌ಕಸ್ ಮಾಡುವುದಕ್ಕೆ ಸಮಯವಿಲ್ಲ, ಏಕೆಂದರೆ, ಅದು ಈಗಾಗಲೇ ಕೋರ್ಟ್ ಮುಂದೆ ಪೆಂಡಿಂಗ್ ಇದೆ. ಅದನ್ನು ಎಕ್ಸ್‌ಪ್ಲೇನ್ ಮಾಡುವುದಕ್ಕೆ ಬರುವುದಿಲ್ಲ. ಯಾವ ಸಂದರ್ಭದಲ್ಲಿ ಆಯಿತು, ಏನಾಯಿತು, ಹೇಗಾಯಿತು, ಅದನ್ನು ಸಿಬಿಐಗೆ

ಕಳುಹಿಸಿದರೆ ಅವರು ಏತಕ್ಕೆ ತೆಗೆದುಕೊಳ್ಳಲಿಲ್ಲ, ನೀವು ಮಾಡಿದ್ದೇ ಸರಿ ಎಂದು ಅವರೂ ಕೂಡ ಹೇಳತಕ್ಕಂಥದ್ದು ಆಯಿತು ಅಥವಾ ಆವಾದ ಇರತಕ್ಕಂಥ ಆಫೀಸರ್‌ರವರು ನನ್ನ ಕಾಲದಲ್ಲಿ ಬಂದವರು ಇರಲಿಲ್ಲ. ನಾನು ಅದರ ಬಗ್ಗೆ ಎಕ್ಸ್‌ಪ್ಲೇನ್ ಮಾಡುವುದು ಬೇಡ, ಏಕೆಂದರೆ ಸಬ್‌ಜ್ಯುಡೀಸ್ ಆಗುತ್ತದೆ. ಅದು ಕೋರ್ಟ್ ಮುಂದೆ ಇದೆ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ನಿನ್ನೆಯ ದಿವಸ ಕಮಲಾಪುರದಲ್ಲಿ ಆಗಿದ್ದು ಎಸ್‌ಸಿ ವರ್ಸ್‌ಸ್ ಎಸ್‌ಟಿ ಆಗಿದೆ, ಸರ್ಕಾರ ದೌರ್ಜನ್ಯ ಮಾಡಿತು, ಈ ಸರ್ಕಾರ ಬಂದ ಮೇಲೆ ಆಯಿತು ಎಂದು ಹೇಗೆ?.. ನೋಡಿ ತಾವು ಕೇಳಿದ್ದಕ್ಕಾಗಿಯೇ ನಾನು ಹೇಳಿದೆ, ನಾನು ಬಹಳ ಸಮಾಧಾನವಾಗಿಯೇ ಕುಳಿತಿದ್ದೇನೆ, ಈಗಲೂ ಸಹ ನಾನು ಕೂರುತ್ತೇನೆ. ನಾನು ಹೇಳುವುದಿಷ್ಟೆ, ತಪ್ಪು ಇದ್ದಲ್ಲಿ ಹೇಳಿ ತಕ್ಷಣ ತಿದ್ದಿಕೊಳ್ಳುತ್ತೇವೆ, ನನಗೆ ಗೊತ್ತಾದ ತಕ್ಷಣ ಕೂಡಲೇ ನಾನು ಅರ್ಧರಾತ್ರಿಯಲ್ಲಿ ಕೃಷ್ಣಪ್ಪನವರನ್ನು ರಿಕ್ವೆಸ್ಟ್ ಮಾಡಿಕೊಂಡು ನೀವು ಹೋಗಿ ವ್ಯವಸ್ಥೆ ಮಾಡಿ ಎಂದು ಹೇಳಿದ್ದೇನೆ. ಇವತ್ತು. 160 ಮನೆ ಮಂಜೂರು ಮಾಡಿ ಅವರಿಗೆ ಕಟ್ಟಿಸಿಕೊಡುವಂಥದ್ದು ಬಹುಶಃ ಇತಿಹಾಸದಲ್ಲಿ ಇದು ಮೊದಲನೆಯ ಸಲವಿರಬಹುದು. ಅನೇಕ ಕಡೆ ಅಟ್ರಾಸಿಟಿ ನಡೆದರೂ ಕೂಡ ಯಾರೂ ಕೂಡ ಕ್ರಮವನ್ನು ಜರುಗಿಸಲಿಲ್ಲ. ಆದರೆ ಅವರಿಗೆ ನಾವು ಸ್ವಲ್ಪ ಬಟ್ಟೆ, ಬರೆ ಕೊಡತಕ್ಕಂಥದ್ದು, ಮೆಟೀರಿಯಲ್ಸ್‌ಗಳನ್ನು ಕೊಡುವುದು ಈ ಎಲ್ಲಾ ವ್ಯವಸ್ಥೆಗಳನ್ನು ಅವರು ಮಾಡಿ ಬಂದಿದ್ದಾರೆ ಮತ್ತೇ ಅದರಲ್ಲಿ....

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅವರು ವ್ಯವಸ್ಥೆ ಮಾಡಿ ಬಂದಿದ್ದಾರೆ ಎಂದು ಹೇಳಿದಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ಸೀನಿಯರ್ ಲೀಡರ್ ಆಗಿದ್ದೀರಿ,... ಮತ್ತೆ ಹೀಗಾಗಬಾರದು, ಹೊಡೆಯುವಷ್ಟು ಹೊಡೆದು ಅನಂತರ ನಾವು ಹೀಗೆ ಮಾಡಿದ್ದೇನೆ ಎಂದು ಹೇಳುವುದು ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾನು ಒಂದು ಮಲ್ಲಿಗೆ ಹಾರವನ್ನು ತೆಗೆದುಕೊಂಡು ಬರುತ್ತನೆ..

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿಮಗೆ ಯಾರು ಮಲ್ಲಿಗೆ ಹಾರವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ? ನನಗೆ ಮಲ್ಲಿಗೆ ಹಾರ ಹಾಕುವುದಿಲ್ಲವೆಂಬುದು ಗೊತ್ತಿದೆ. ನಾನು ಒಳ್ಳೆಯ ಕೆಲಸವನ್ನು ಮಾಡಿದರೂ ಕೂಡ ಮಲ್ಲಿಗೆಯ ಹಾರ ನಿಮ್ಮ ಕಡೆಯಿಂದ ಬರುವುದಿಲ್ಲವೆಂಬುದು ಗೊತ್ತಿದೆ. ಈ ಸಮಾಜದ ವ್ಯವಸ್ಥೆಯೇ ಹೀಗೆ ಇದೆ, ನೀವು ಏನು ಮಾಡುತ್ತೀರಿ ಬಿಡಿ..

ಶ್ರೀ ಪಿ.ಜಿ.ಆರ್. ಸಿಂಧ್ಯ :- ಸಮಾಜವೆಂದು ಹೇಳಿ ನೀವು ರಕ್ಷಣೆಯನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಹೀಗೆಂದು ಎಂದೂ ರಕ್ಷಣೆಯನ್ನು ತೆಗೆದುಕೊಂಡಿಲ್ಲ. ಅದನ್ನು ಮಾತನಾಡುವುದಕ್ಕೂ ಕೂಡ ಹೋಗುವುದಿಲ್ಲ. ನಾನು ಎಂದೂ ನಿಮ್ಮ ಸರ್ಕಾರ ಇದ್ದಾಗಲೂ ಕೂಡ ಮಾತನಾಡಿಲ್ಲ. ಅದು ಇರಲಿ ಬಿಡಿ. ನಾನು ಪರಿಶಿಷ್ಟ ಜಾತಿಯ ಮೇಲೆ ಇಲ್ಲಿ ಕೇಳುತ್ತಿಲ್ಲ.... ನನಗೆ ಎಲ್ಲಾ ಗೊತ್ತಿದೆ ಮಾನ್ಯ ಸೋಮಶೇಖರ್‌ರವರೇ ದಯಮಾಡಿ ತಾವು ಕೇಳಿ...

ಶ್ರೀ ಬಿ. ಸೋಮಶೇಖರ್ :- ತಾವು ಸಮಾಜ. ಸಮಾಜ ಎಂದು ಹೇಳುತ್ತಿದ್ದೀರಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಸಿಂಧ್ಯಾರವರು ಮಲ್ಲಿಗೆ ಹಾರ ಮತ್ತು ಸಮಾಜ ಎಂದು ಹೇಳಿದ ಮೇಲೆ ನಾನು ಹೇಳಿದೆ, ಅವರು ಮೊದಲು ಏನು ಹೇಳಿದರೆಂದರೆ ನೀವು ಈ ಸಮಾಜದಿಂದ ಬಂದಿದ್ದೀರಿ, ಅದಕ್ಕೇ, ಹೇಳಿದೆ, ಎಂದು ಹಾಗಾದರೆ ಬೇರೆ ಸಮಾಜದವರು ಇದ್ದರೆ ಅದು ನಡೆಯಬಹುದೆ?

ಶ್ರೀ ಬಿ. ಸೋಮಶೇಖರ್ :- ಅದು ನಡೆಯುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ತಾವು ಈ ರೀತಿಯಾಗಿ ವಿಷಯಾಂತರ ಮಾಡುವುದಕ್ಕೆ ಹೋಗಬೇಡಿ, ನೀವೇ ಹೇಳಿರುವುದು, ಇತ್ತೀಚಿನ ದಿನಗಳಲ್ಲಿ ಬಳ್ಳಾರಿಯಲ್ಲಿ, ರಾಯಚೂರಿನಲ್ಲಿ ಎಸ್‌ಸಿ:ಎಸ್‌ಟಿಗಳಿಗೆ ಹೀಗಾಗುತ್ತಿದೆ ಎಂದು ನೀವು ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಆರು ಸಲ ಕಿಡ್ನಾಪ್ ಆಯಿತು, ಆ ಸಂದರ್ಭದಲ್ಲಿ ನಾವು ಹಾಗೆಯೇ ಹೇಳಿದ್ದೇವಾ ನಿಮಗೆ? ಇದು ಒಂದು ಆದರೆ....

ಶ್ರೀ ಪಿ.ಜಿ.ಆರ್. ಸಿಂಧ್ಯ :- ಹೌದೌದು, ಇದೊಂದು ಆಗಿರುವುದು ನಾಗಪ್ಪನವರು ಒಬ್ಬರೇ ಸತ್ತು ಹೋಗಿರುವುದು. ಕಿಡ್ನಾಪ್ ಆಗಿರುವವರು ಯಾರೂ ಸತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸಾಕಷ್ಟು ಇದೆ, ಅದನ್ನು ನಾನು ಹೇಳುವುದು ಬೇಡ. ಎಲ್ಲಿ ತಪ್ಪಾಗಿದೆ ಅದನ್ನು ಸರಿಪಡಿಸೋಣ, ಆದರೆ ಅದೇ ನೆಪವನ್ನು ಮುಂದಿಟ್ಟುಕೊಂಡು ಪದೇ ಪದೇ ಟೀಕೆಯನ್ನು ಮಾಡುವುದು, ಪದೇ ಪದೇ ಚುಚ್ಚು ಮಾತನ್ನು ಆಡುವುದು ಇದು ಸರಿಯಲ್ಲ ಎಲ್ಲಿ ಸಣ್ಣಪುಟ್ಟ ದೋಷಗಳಿದ್ದರೆ ಅದನ್ನು ಸರಿಪಡಿಸೋಣ. ಅಥವಾ ಯಾವ ಅಧಿಕಾರಿ ತಪ್ಪು ಮಾಡಿದ್ದರೆ ಖಂಡಿತವಾಗಿ ಶಿಕ್ಷೆಯನ್ನು ಕೊಡೋಣ. ಅವನಿಗೆ ಬೆಂಬಲ ನೀಡುವುದಕ್ಕಾಗುತ್ತದೆಯೇ ಅಥವಾ ಅವನಿಗೆ ರಕ್ಷಣೆ ಮಾಡುವುದಕ್ಕಾಗುತ್ತದೆಯೇ? ನಾವು ಎಂದೂ ರಕ್ಷಣೆಯನ್ನು ಮಾಡುವುದಿಲ್ಲ. ಅವರು ಯಾರೇ ಇರಬಹುದು, ಅದರ ಬಗ್ಗೆ ದಯವಿಟ್ಟು ಯಾರೂ ಕೂಡ ಆ ರೀತಿಯಾದ ಭಾವನೆಯನ್ನು ಬೆಳಸಬಾರದು ಯಾರೇ ಆಫೀಸರ್ಸ್ ಇರಲಿ, ಖಂಡಿತವಾಗಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಛೇರ್ಮನ್‌ನವರೆ, ಯಾಕೋ ಅವರು ಬಹಳ ನೋವು ಮಾಡಿಕೊಂಡು ಮಾತನಾಡಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೋವು ಏನೂ ಇಲ್ಲ.

ಶ್ರೀ ಬಿ. ಸೋಮಶೇಖರ್ :- ಒಂದು ನಿಮಿಷ ತಾಳಿ ತಾವು ನೋವು ಮಾಡಿಕೊಳ್ಳಬೇಡಿ. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಅದು ಸರಿಯಿಲ್ಲವೆಂದು ನಾವು ಹೇಳುವುದಿಲ್ಲ. ಅದು ನಮಗೆ ಒಪ್ಪಿಗೆಯಾಯಿತು. ಸಾಕಾದಷ್ಟು ಪ್ರಾಮಾಣೀಕವಾಗಿ ತಕ್ಷಣ ತಾವು ಹೋಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೀರಿ, ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ನಾನು ಹೇಳತಕ್ಕಂಥದ್ದು ದೌರ್ಜನ್ಯವಾದ ಮೇಲೆ ನೀವು ಏನು ಪರಿಹಾರವನ್ನು ಕೊಡುತ್ತಿರಲ್ಲಾ That is not important. ಅದನ್ನು ನೀವು ಪ್ರೀವೆಂಟ್ ಮಾಡಬಹುದಾಗಿತ್ತು. ಅಂಥ ಘಟನೆಗಳು ನಡೆಯಬಾರದು, ಸರ್ಕಾರದ ಮೇಲೆ ಭಯ, ಭೀತಿ ಇರಬೇಕು ಅಂಥ ನಾನು ಹೇಳುತ್ತಿರುವುದು...

ಯಾರಾದರೂ ಮಾಡಬೇಕಾದರೆ ಅವರಿಗೆ ಭಯ ಇರಬೇಕು, ಹೋಮ್ ಮಿನಿಸ್ಟರ್ ಇದ್ದಾರೆ, ಎಸ್‌ಪಿ ಇದ್ದಾರೆ, ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ದಬ್ಬಾಳಿಕೆ ಮಾಡಬಾರದು. ಗುಡಿಸಲುಗಳನ್ನು ಸುಡಬಾರದು, ಅವರಿಗೆ ಆ ಭಯ ಇದ್ದರೆ ಗುಡಿಸಲುಗಳನ್ನು ಸುಡುತ್ತಿದ್ದರೆ? ಆ ಭಯ ಇಲ್ಲ ಎನ್ನತಕ್ಕಂಥದ್ದು, ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಒಂದು ಕ್ರಿಕೆಟ್ ಆಟಗಾರರ ವಿಚಾರ ಎತ್ತಿದೆ. ತಾವು ಇಲ್ಲಿ ಆದೇಶವನ್ನು ಮಾಡಿದಿರಿ, ಸಸ್ಪೆಂಡ್ ಮಾಡಿದ್ದೇವೆಂದು, 3-4 ತಿಂಗಳು ಆಗಿದೆ ಇಲ್ಲಿಯವರೆಗೆ ರಿಲೀವ್ ಮಾಡಿಲ್ಲ. ಏನು ಭಯ ಬಂತು? ವಿಧಾನಸಭೆಯ ಒಳಗಡೆ ಸಂಬಂಧಪಟ್ಟ ಮಂತ್ರಿ ಆದೇಶ ಮಾಡಿದ ಮೇಲೆ ಅದು ಇನ್ನು ರಿಲೀವ್ ಆಗಿಲ್ಲವೆಂದು ಹೇಳಿದರೆ, ಇವರಿಗೆ ಏನು ಭಯವಿದೆ? ನನಗೆ ಆಶ್ಚರ್ಯವಾಯಿತು, ಮೊನ್ನೆ ದಿವಸ ಕೂರ್ಗ್‌ದಿಂದ ಬಂದ ಆ ಹುಡುಗ, ಸ್ವಾಮಿ ಆದೇಶ ಮಾಡಿದರು ಆ ಕೆಲಸದಲ್ಲಿ ಇದ್ದುಕೊಂಡು ಸಸ್ಪೆಂಡ್ ಮಾಡಿದ್ದೇವೆಂದು ಹೇಳಿ, ಕ್ರಮ ತೆಗೆದುಕೊಂಡಿಲ್ಲ ಇನ್ನು ರಿಲೀವ್ ಆಗಿಲ್ಲ ಅವನ್ನು ಇನ್ನೂ ದಬ್ಬಾಳಿಕೆ ಮಾಡುತ್ತಿದ್ದಾನೆ ಎಂದು ಹೇಳಿದನು ಇದಕ್ಕೆ ಏನು ಹೇಳುತ್ತೀರಿ? ಆ ಭಯ ಇರಬೇಕು ಎಂದು ನಾನು ಹೇಳುವುದು.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :- ಮಾನ್ಯ ಛೇರ್ಮನ್‌ರೆ, ಯಾವುದೇ ಘಟನೆಗಳು ಹೇಳಿಕೇಳಿ ಅಥವಾ ಯಾವುದೇ ಭಯದ ಹಿನ್ನೆಲೆಯಲ್ಲಿ ಆಗುವುದಿಲ್ಲ, ಆಕಸ್ಮಿಕವಾಗಿ ಘಟನೆಗಳು ಆಗುವುದು, ಆದಮೇಲೆ ಏನು ಮಾಡಬೇಕು, ಮುಂದೆ ಆಗದ ರೀತಿಯಲ್ಲಿ ಏನು ಮಾಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಿದರೆ ಒಳ್ಳೆಯದು. ಯಾವುದೇ ಘಟನೆಗಳು ಆಗಬೇಕಾದರೆ ಹೇಳಿಕೇಳಿ ಆಗುತ್ತವೆಯೇ?

ಶ್ರೀ ಬಿ. ಸೋಮಶೇಖರ್ :- ಮಾನ್ಯ ಛೇರ್ಮನ್‌ರವರಲ್ಲಿ, ಇದಕ್ಕೆ ಅರ್ಥ ಸರ್ಕಾರದ ಕರ್ತವ್ಯ ಏನಿದ್ದರೂ ಘಟನೆಯಾದ ಮೇಲೆ ಪರಿಹಾರ ಮಾಡುವುದು ಒಂದೇ ಅವರು ಹೇಳುವ ಪ್ರಕಾರ. ಘಟನೆಯಾಗುತ್ತಿರುತ್ತದೆ ಪರಿಹಾರ ಮಾತ್ರ ಮಾಡುತ್ತೇವೆ, ಘಟನೆಯಾಗಬಾರದು ಎನ್ನುವ ಕಡೆ ಸರ್ಕಾರದ ಲಕ್ಷ್ಯ ಇಲ್ಲ. ಘಟನೆಯಾಗಬಾರದೆಂಬುದು ಸರ್ಕಾರದ ಕರ್ತವ್ಯ ಅಲ್ಲವೆ? ಏನು ಮಂತ್ರಿಗಳು ತಾವು ಮಾತನಾಡುತ್ತಾ ಇರತಕ್ಕಂಥದ್ದು? ಅತ್ಯಾಚಾರವಾಗತಕ್ಕಂಥದ್ದನ್ನು ನಾವು ತಡೆಯಬಾರದೆ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ :- ಮಾನ್ಯ ಛೇರ್ಮನ್‌ರೆ, ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ ಅವರ ಮನೆಯ ಎದುರುಗಡೆ ಅಪ್ರಾಪ್ತ ವಯಸ್ಸಿನ ಹುಡುಗಿಯ ಮೇಲೆ ಆಗಿರುವ ಅತ್ಯಾಚಾರವಾಗುವುದನ್ನು ಅವರು ತಡೆಯಲಿಲ್ಲ ಅವರ ಮನೆಯ ಎದುರುಗಡೆಯ ಸ್ಕೂಲಿನ ಬಿಲ್ಡಿಂಗ್‌ನಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣುಮಗಳ ಮೇಲೆ ಅತ್ಯಾಚಾರ ಆಯಿತು. ಅದನ್ನು ತಡೆಯಲಿಲ್ಲ. ಎನ್‌ಕ್ವಯರಿ ಆಗಲಿಲ್ಲ. ಏನೂ ಆಗಲಿಲ್ಲ. ಅದನ್ನು ಮುಚ್ಚಿ ಹಾಕಿದರು. ಇದು ಇವತ್ತು ಇರತಕ್ಕಂಥ ವ್ಯವಸ್ಥೆ.

ಶ್ರೀಮತಿ ಮೋಟಮ್ಮ :- ಮಾನ್ಯ ಛೇರ್ಮನ್‌ರವರೇ, ಅದು ರಾತ್ರಿ ಒಂದು ಗಂಟೆಗೆ ಆಗಿರುವ ಘಟನೆ ಅದನ್ನು ಮೋಟಮ್ಮ ನಿಂತು ತಡೆಯುವುದಕ್ಕೆ ಆಗುತ್ತಿರಲಿಲ್ಲ. ಅದು ಆಕಸ್ಮಿಕವಾಗಿ ಆಗಿರುವ ಘಟನೆ, ಅದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಂಡಿದ್ದಾರೆ ಬಿಡಿ. ನಿಮ್ಮ ಏರಿಯಾದಲ್ಲಿ ಆಗಿದ್ದರೆ ನೀವು ಏನು ಮಾಡುತ್ತಿದ್ದೀರಿ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ :- ಮಾನ್ಯ ಛೇರ್ಮನ್‌ರವರೇ, ಅದಕ್ಕೆ ಏನು ಕ್ರಮ ತೆಗೆದುಕೊಂಡಿರಿ, ಏನೂ ಆಗಲಿಲ್ಲ. ಆ ಘಟನೆ ಆಗಬೇಕಾದರೆ ನೀವು ಇದ್ದಿರಿ, ನೀವು ಪ್ರಚೋದನೆ ಮಾಡಿದಿರಿ ಎಂದು ಹೇಳಿದ್ದು ಅಲ್ಲ, ಅದು ಆದಮೇಲೆ ನೀವು ಯಾರೆ ಮೇಲೂ ಏನು ಕ್ರಮ ತೆಗೆದುಕೊಳ್ಳಲಿಲ್ಲವೆಂದು ನಾನು ಹೇಳಿದ್ದು. ಅದನ್ನು ಹಾಗೇ ಮುಚ್ಚಿ ಹಾಕಿದರು. ಏತಕ್ಕೆ ಏನ್ನುವುದನ್ನು ಅವರು ಸಾರ್ವಜನಿಕವಾಗಿ ಹೇಳಬೇಕಲ್ಲವೆ?

ನಿಯಮ 69ರ ಮೇರೆಗೆ

ಅ) ಮಾಜಿ ಸಚಿವರಾದ ಶ್ರೀ ಹೆಚ್ ನಾಗಪ್ಪನವರ ಅಪಹರಣ ಮತ್ತು ಅವರ ದುರಂತ ಸಾವಿನ ಬಗ್ಗೆ (ಮುಂದು)

ಛೇರ್ಮನ್ :- ಕೃಷ್ಣಮೂರ್ತಿಯವರೆ, ತಾವು ಪ್ರಾರಂಭ ಮಾಡಿ. ಮೂರುಮುಕ್ಕಾಲು ಆಯಿತು, ಮಾತನಾಡುತ್ತಾ ಸ್ವಲ್ಪ ತಾವು ಆ ಕಡೇನೂ ನೋಡಿ.

+ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರನಹಳ್ಳಿ) :- ಮಾನಯ ಛೇರ್ಮನ್‌ರೆ, ಆದಷ್ಟು ಪ್ರಯತ್ನವನ್ನು ಮಾಡುತ್ತೇನೆ. ನಾನು ಬೆಳಿಗ್ಗೆ ಊಟಕ್ಕೆ ಬಿಡುವ ಸಮಯಕ್ಕೆ ನಾನು ಕಾಮಗೆರೆಯವರೆಗೆ ಬಂದಿದ್ದೆ. ಕಾಮಗೆರೆಯಲ್ಲಿ ಆ ಪಾರ್ಥಿವ ಶರೀರವನ್ನು ತೆಗೆದುಕೊಂಡು ಬಂದ ಸಂದರ್ಭದಲ್ಲಿ ನಾನು ಮಹದೇವ ಪ್ರಸಾದ್ ಮತ್ತು ಗುರುಸ್ವಾಮಿಯವರು, ಜಯಣ್ಣನವರು ಮತ್ತು ಚರ್ಚಿನ ಫಾದರ್‌ರವರು, ಮನೆಯಿಂದ ಆ ಪಾರ್ಥಿವ ಶರೀರವನ್ನು ಗೌರವಪೂರ್ವಕವಾಗಿ ಊರಿನ ಹೊರಗಡೆಯಿಂದ ಬರಮಾಡಿಕೊಳ್ಳೋಣವೆಂದು ನಾವು ಒಟ್ಟುಗೂಡಿ ಎಲ್ಲರೂ ಹೋದೆವು. ಅಲ್ಲಿಯ ಸಾರ್ವಜನಿಕರು ಕೂಡ ಆ ಪಾರ್ಥಿವ ಶರೀರದ ವಾಹನದ ಹಿಂದುಗಡೆ ಪೊಲೀಸರ ಒಂದು ಟ್ರೋಫೇ ಬರುತ್ತಿತ್ತು. ಆ ಸಂದರ್ಭದಲ್ಲಿ ನಾವೆಲ್ಲರೂ ಕೂಡ, ಪೊಲೀಸ್‌ನವರು ಊರೊಳಗಡೆ ಬರುವುದು ಬೇಡ, ಏಕೆಂದರೆ ನಾಗಪ್ಪನವರನ್ನು ಅವರ ಕೈಯಿಂದ ಬಿಡಿಸಿಕೊಂಡು ಬರುವುದಕ್ಕಾಗಲಿಲ್ಲ, ನಮ್ಮ ಊರಿಗೆ ಈಗ ಏಕೆ ಅವರು ರಕ್ಷಣೆಗೆ ಬಂದಿದ್ದಾರೆ. ಈಗ ಏನು ರಕ್ಷಣೆಯ ಅವಶ್ಯಕತೆ ಇಲ್ಲ, ಅದಕ್ಕಾಗಿ ಅವರು ನಮ್ಮ ಊರಿನಿಂದ ಹೊರಗಡೆಯೇ ಇರಲಿ ಎನ್ನುವ ಅಭಿಪ್ರಾಯವನ್ನು ಜನರು ವ್ಯಕ್ತಪಡಿಸುತ್ತಿದ್ದರು. ಸಾಧ್ಯವಾದಷ್ಟು ಕೂಡ ನಾವು ಪೊಲೀಸ್‌ನವರಿಗೆ ನೀವು ಊರೊಳಗಡೆ ಬರುವುದು ಬೇಡವೆಂದೂ, ನೀವು ಅಲ್ಲಿಯೇ ನಿಲ್ಲಿ ಎನ್ನುವ ಒಂದು ಕೈಸನ್ನೆಯನ್ನು ಕೂಡ ಮಾಡಿದೆವು. ಅವರು ದೂರದಲ್ಲಿ ಇದ್ದರು. ಆ ನಂತರ ಆ ಕಳೇಬರಹವನ್ನು ಹೊತ್ತಂಥ ವಾಹನ ಬಂದಾಗ, ಅದರ ಮುಂಭಾಗದಲ್ಲಿ ನಿಂತು ನಾವೆಲ್ಲರೂ ಕೂಡ ಆ ಪಾರ್ಥಿವ ಶರೀರಕ್ಕೆ ಗೌರವವನ್ನು ಸಲ್ಲಿಸುತ್ತಿದ್ದೆವು. ನನ್ನ ಆದಿಯಾಗಿಯೂ ಕೂಡ, ಏಕಾಏಕಿ ಪೊಲೀಸ್‌ನವರು ಹಿಂದಿನಿಂದ ಲಾಠಿ ಚಾರ್ಜ್‌ನ್ನು ಮಾಡಿದರು, ಲಾಠಿ ಚಾರ್ಜನ್ನು ಮಾಡಿದ್ದಕ್ಕೆ ಕಾರಣಗಳೇನು ಎನ್ನುವುದು ನನ್ನ ಮುಂದೆ ಇರತಕ್ಕಂಥ ಪ್ರಶ್ನೆ. ಇವರು ಯಾವಾಗ ಲಾಠಿ ಚಾರ್ಜನ್ನು ಮಾಡುವುದಕ್ಕೆ ಶುರು ಮಾಡಿದರು, ಅಲ್ಲಿ ಇದ್ದಂಥವರು, ಇಂತಹ ಒಳ್ಳೆಯ ವ್ಯಕ್ತಿಗಳು, ನಾಗಪ್ಪನವರಿಗೆ ಇಂತಹ ಹತ್ಯೆಯಾಯಿತಲ್ಲಾ - ಎಂದು ಹೇಳಿ, ಎಂತಹ ಒಂದು ಒಳ್ಳೆಯ ವ್ಯಕ್ತಿಗೂ ಕೂಡ, ರೋಷ ಬಂದಾಗ ಆ ಎಮೋಷನ್‌ನ್ನು ತಡೆಯುವುದಕ್ಕಾಗುವುದಿಲ್ಲ. ಆ ಸಂದರ್ಭದಲ್ಲಿ ಅಮಾಯಕರ ಮೇಲೆ ಪೊಲೀಸ್‌ನವರು ಲಾಠಿ ಚಾರ್ಜ್ ಮಾಡಿದರಲ್ಲಾ ಎಂದು ಹೇಳಿ, ಜನರು ಕೂಡ ಪೊಲೀಸ್‌ನವರ ಮೇಲೆ ಬಿದ್ದಿರತಕ್ಕಂಥದ್ದು ಕೂಡ ಸತ್ಯ. ನನ್ನ